ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲೆ ಆದ ಆದೇಶದ ಮೇರೆಗೆ ದಿಃ 16-06-2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರ ವಕೀಲರಾದ ಶ್ರೀ ಎಂ ವೈ ಜೆ ರವರಿಂದಃ

ನನ್ನ ತಂದೆ ಹಾಗೂ ಪ್ರತಿವಾದಿಯರ ತಂದೆಯ ಮಧ್ಯೆ ದಿಃ 12-04-1973 ರಂದು ಆದ ಕ್ರಯ ಕರಾರು ಪತ್ರದ ಧೃಡೀಕೃತ ನಕಲನ್ನು ಹಾಜರು ಪಡಿಸಿರುತ್ತೇನೆ ಸದರಿ ದಾಖಲೆಯನ್ನು ಪ್ರತಿವಾದಿಯರ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ-1 ಎಂದು, ನಾವು ದಿಃ 16-02-2017 ರಂದು ಪ್ರತಿವಾದಿಯರಿಗೆ ಕಳುಹಿಸಿದ ನೋಟಿಸಿನ ಕಚೇರಿ ಪ್ರತಿ ಹಾಜರು ಪಡಿಸಿರುತ್ತೇನೆ ಸದರಿ ದಾಖಲೆಯನ್ನು ನಿಪಿ-2 ಎಂದು , ನಿಪಿ-2 ಕಳುಹಿಸಿರುವ ಕುರಿತು ಅಂಚೆ ರಶೀದಿ ಹಾಜರು ಪಡಿಸಿರುತ್ತೇನೆ ಸದರಿ ದಾಖಲೆಯನ್ನು ನಿಪಿ-3 ಎಂದು, ನಿಪಿ-2 ರ ನೋಟೀಸು ಪ್ರತಿವಾದಿಗೆ ಜಾರಿಯಾಗಿರುವ ಕುರಿತು ಅಂಚೆ ತಲುಪೋಪ್ಪಿಗೆ ಪತ್ರ ಹಾಜರು ಪಡಿಸಿರುತ್ತೇನೆ ಸದರಿ ದಾಖಲೆಯನ್ನು ನಿಪಿ-4 ಎಂದು, ನಿಪಿ-2 ರ ನೋಟಿಸಿಗೆ ಪ್ರತಿವಾದಿಯರು ತಮ್ಮ ವಕೀಲರ ಮುಖಾಂತರ ದಿಃ 23-02-2017 ರಂದು ಕಳುಹಿಸಿದ ಪ್ರತ್ಯುತ್ತರ ಪತ್ರ ಹಾಜರು ಪಡಿಸಿರುತ್ತೇನೆ ಸದರಿ ದಾಖಲೆಯನ್ನು ನಿಪಿ-5 ಎಂದು, ದಾವಾ ಸ್ವತ್ತಿಗೆ ಸಂಬಂಧಿಸಿದ ಸರ್ವೆ ನಂ.117/ಪಿ2 ರ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿರುತ್ತೇನೆ ಸದರಿ ದಾಖಲೆಯನ್ನು ನಿಪಿ-6 ಎಂದು, ಸರ್ವೆ ನಂ.262/ಅ ರ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿರುತ್ತೇನೆ ಸದರಿ ದಾಖಲೆಯನ್ನು ನಿಪಿ-7 ಎಂದು, ಸರ್ವೆ ನಂ.262/ಬ ರ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿರುತ್ತೇನೆ ಸದರಿ ದಾಖಲೆಯನ್ನು ನಿಪಿ-8 ಎಂದು, ನನ್ನ ಅಜ್ಜನ ಮರಣ ಪ್ರಮಾಣ ಪತ್ರ ಹಾಜರು ಪಡಿಸಿರುತ್ತೇನೆ ಸದರಿ ದಾಖಲೆಯನ್ನು ನಿಪಿ-9 ಎಂದು, ನನ್ನ ತಂದೆಯ ಮರಣ ಪ್ರಮಾಣ ಪತ್ರ ಹಾಜರು ಪಡಿಸಿರುತ್ತೇನೆ ಸದರಿ ದಾಖಲೆಯನ್ನು ನಿಪಿ-10 ಎಂದು, ದಿಃ 01-01-2020 ರಂದು ಬೈಲಹೊಂಗಲ ಉಪವಿಭಾಗಧಿಕಾರಿಗಳು ನೀಡಿದ ತಿಳುವಳಿಕೆ ಪತ್ರ ಹಾಜರು ಪಡಿಸಿರುತ್ತೇನೆ ಸದರಿ ದಾಖಲೆಯನ್ನು ನಿಪಿ-11 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ

ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.